## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

**ಸಿಸಿ ನಂ ಃ 1449/2022**
**ಸಿಡಬ್ಲು ಃ 7**
**ಪಿಡಬ್ಲು ಃ 6**

**ಹೆಸರು** ಃ ವಸೀಮರಾಜ ಮೊಹಮ್ಮದ ಇಸಾಕ ದನವಾಡ
ವಯಸ್ಸು : 46 ವರ್ಷ
**ಉದ್ಯೋಗ** ಃ ಮುಖ್ಯ ಪೇದೆ , ಖಾನಾಪೂರ ಪೊ.ಠಾ
**ವಾಸ** ಃ ಖಾನಾಪೂರ

**(ದಿನಾಂಕಃ 31-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ ಸಸಅಃರವರಿಂದಃ**

1. ನಾನು ಡಿಸೆಂಬರ – 2019 ರಿಂದ ಸೆಪ್ಟೆಂಬರ – 2023 ರ ವರೆಗೆ ಯವುಕನಮರಡಿ ಪೋಲಿಸ ಠಾಣೆಗೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

2. ಈ ಪ್ರಕರಣದಲ್ಲಿ ದಿನಾಂಕ 18-08-2022 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ರಾತ್ರಿ 20-30 ಗಂಟೆಗೆ ಮಾವನೂರ ಗ್ರಾಮದಲ್ಲಿ ರೇಡ ಮಾಡಿ ಆರೋಪಿ ಸಮೇತ ನನಗೆ ಮುದ್ದೆಮಾಲು ಮತ್ತು ಪಂಚನಾಮೆಯನ್ನು ಕೊಟ್ಟರು . ನಾನು ಅದನ್ನು ಸ್ವೀಕರಿಸಿ ಸರಕಾರದ ಪರವಾಗಿ ದೂರು ದಾಖಲಿಸಿಕೊಂಡು ಅದನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ನಂ. 220/2022 ರಲ್ಲಿ ಪ್ರಕರಣ ದಾಖಲಿಸಿ ಪರ ವ ವರದಿ ರಜಿಸ್ಟರ ಮಾಡಿಂದ್ದೇನೆ.

ಸದ್ರಿ ದೂರನ್ನು ಈಗ ನೋಡುತ್ತಿದ್ದು ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಪ್ರ ವ ವರ ದಾಖಲಿಸಿದ್ದು ಅದನ್ನು ಈಗ ನೋಡುತ್ತಿದ್ದು ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿ.ಪಿ-7 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು.

ಆರೋಪಿಗೆ ನಾನು ಕಲಂ 41(ಎ) ಸಿ ಆರ್ ಪಿಸಿ ಅಡಿ ನೋಟಿಸು ಕೊಟ್ಟು ಆತನನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ನೋಟಿಸನ್ನು ಈಗ ನೋಡುತ್ತಿದ್ದು ಅದರಲ್ಲಿ ಇರುವ

ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿ.ಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ದಾಳಿ ಕಾಲದ ಸಿಬ್ಬಂದಿಗಳ ಹೇಳಿಕೆ ಪಡೆದುಕೊಂಡಿರುತ್ತೇನೆ. ಜಪ್ತಾದ ಮುದ್ದೆಮಾಲನ್ನು ಪಿ ಎಫ್ ಭರಣಾ ಮಾಡಿ

ಅಬಕಾರಿ ಇಲಾಖೆಗೆ ಉಳಿದ ಮುದ್ದೆಮಾಲನ್ನು ಹಸ್ತಾಂತರ ಮಾಡಿರುತ್ತೇನೆ. ನಂತರ ದಿನಾಂಕ 25-8-2022 ರಂದು ಆರ್ ಎಸ್ ಪಾಟೀಲ, ಪಿಸಿ-3188 ಇವರ ಮುಖಾಂತರ ಮುದ್ದೆಮಾಲನ್ನು ಪರೀಕ್ಷೆಗಾಗಿ ಧಾರವಾಡದ ಆರ್ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ಅದೇ ದಿನ ಎಫ್ ಎಸ್ ಎಲ್ ವರದಿ ಹಾಗೂ ಆರ್ ಎಸ್ ಪಾಟಿಲ ಇವರ ವರದಿ ಪಡೆದಿರುತ್ತೇನೆ. ದಿನಾಂಕ 25-8-2022 ರಂದು ಆರ್ ಎಫ್ ಎಸ್ ಎಲ್ ಗೆ ಕಳುಹಿಸಿದಂತಹ ಪತ್ರ ನೋಡುತ್ತಿದ್ದು ಅದನ್ನು ನಿ.ಪಿ-9 ಎಂದು ಸಾಕ್ಷಿ ಸಹಿಯನ್ನು ನಿ.ಪಿ-9(ಎ) ಎಂದು ಗುರುತಿಸಲಾಯಿತು. ಆರ್ ಎಫ್ ಎಸ್ ಎಲ್ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿ.ಪಿ-5(ಬಿ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಎ ಎಸ್ ಐ ಉಪ್ಪಾರೆಟ್ಟಿ ಇವರಿಗೆ ವಹಿಸಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಐ ಕೆ ಎಚ್ ವಕೀಲರಿಂದ -</u>**

ನಮ್ಮ ಠಾಣೆಯಲ್ಲಿ ಔಟವರ್ಡ ಪುಸ್ತಕ ಇರುತ್ತದೆ. ಎಫ್ ಎಸ್ ಎಲ್ ಗೆ ಕಳುಹಿಸಿದ ಬಗ್ಗೆ ಅದರಲ್ಲಿ ನಮೂದು ಮಾಡಿರುತ್ತೇವೆ. ಅದರ ಪ್ರತಿಯನ್ನು ಹಾಜರ ಮಾಡಿಲ್ಲ. ದಾಳಿ ಮಾಡುವ ಮುಂಚೆ ಚಾಸಾ-1 ರವರು ಪ್ರ ವ ವರದಿ ನಮೂದು ಮಾಡಿರುವುದಿಲ್ಲ. ನಾನು ತನಿಖಾ ಸಮಯದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದೇನೆ. ಭೆಟಿ ನೀಡಿದ ಬಗ್ಗೆ ಅಲ್ಲಿ ಇದ್ದಂತಹ ಜನರ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಮತ್ತು ಅದರ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಎಫ್ ಎಸ್ ಎಲ್ ಗೆ ತೆಗೊಕೊಂಡಂತಹ ನಮ್ಮ ಸಿಬ್ಬಂದಿಯ ಬಸ್ ವಾರಂಟನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ . ಚಾಸಾ-1 ರವರು ಮಾವನೂರ ಗ್ರಾಮಕ್ಕೆ ದಾಳಿಗೆ ಹೋಗಿದ್ದರು ಎಂಬ ಬಗ್ಗೆ ಪಂಚನಾಮೆ ಕೊಟ್ಟಿರುತ್ತಾ. ಚಾಸಾ-1 ರವರಿಗೆ ಪೆಟ್ರೋನಿಂಗ ಸಮಯದಲ್ಲಿಯೇ ಮಾಹಿತಿ ಬಂದಿದಿತ್ತು.

ನಮ್ಮ ಮೇಲಾಧಿಕಾರಿಗಳು ಪ್ರತಿ ತಿಂಗಳು ಸಭೆ ಕರೆಯುತ್ತಾರೆ ಎಂದರೆ ನಿಜ. ಸಭೆಯಲ್ಲಿ ಇಂತಿಷ್ಟು ಪ್ರಕರಣಗಳನ್ನು ಹಾಕಬೇಕೆಂದು ನಿರ್ದೇಶನ ಕೊಟ್ಟಿರುತ್ತಾರೆ

ಎಂದರೆ ಸರಿ . ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾವು ನಮ್ಮ ಮೇಲಾಧಿಕಾರಿಯ ಮಾತು ಕೇಳಿ, ಆತನ ಮೇಲೆ ಒಂದು ಸುಳ್ಳು ಕೇಸು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ತನಿಖೆ ಮಾಡುವ ಕಾಲದಲ್ಲಿ ಆರೋಪಿ ತಪ್ಪು ಮಾಡದೇ ಇದ್ದದ್ದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

( ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ

**( ಆದಿತ್ಯ ಆರ್ ಕಲಾಲ್ )**

**ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ ಹುಕ್ಕೇರಿ**